**ಇಂದು ದಿಃ19-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ: ಶ್ರೀ ಪಿ.ಕೆ.ಎಸ್ ವಕೀಲರಿಂದ 2 ನೇ ಎದುರುದಾರರ ಪರ:

**ನಾನು, ನನ್ನ ಮುಖ್ಯ ವಿಚಾರಣೆಯ ಅಂಶಗಳನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳು ಸತ್ಯವಾಗಿರುತ್ತವೆ.**

ನಾನು 1 ಮತ್ತು 3 ನೇ ಎದುರಾರಿಗೆ ನಮ್ಮ ಕಂಪನಿಯ ವಕೀಲರು ಕುಳಹಿಸಿದ ನೋಟೀಸ್ ನ ಕಚೇರಿಯ ಪ್ರತಿಯನ್ನು, 3 ಅಂಚೆ ರಶೀದಿಗಳನ್ನು, ಎರಡು ಸದರಿ ಎದುರುದಾರರು ಪಡೆಯದೇ ಅಂಚೆ ಲಕೋಟೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಆರ್-11 ರಿಂದ 16 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಆರ್.ಪಿ ವಕೀಲರಿಂದ ಅರ್ಜಿದಾರರ ಪರಃ

ಅಪಘಾತದ ಸಮಯದಲ್ಲಿ ವಿಮೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಚಾರ್ಜ್ ಶೀಟ್ ನ್ನು ನಾವು ಪ್ರಶ್ನಿಸಿಲ್ಲ ಎಂದರೆ ಸರಿ. ಚಾಲಕನಿಗೆ ಡಿ.ಎಲ್ ಇರುವ ಕಾರಣ, ಮತ್ತು ವಿಮೆ ಇರುವ ಚಾಲ್ತಿಯಲ್ಲಿ ಇರುವ ಕಾರಣ, ನಾವೇ ಪರಿಹಾರಕೊಡಲು ಭಾದ್ಯಸ್ಥರು ಎಂದರೆ ಸರಿಯಲ್ಲ. ನಮ್ಮ ಭಾದ್ಯಸ್ಥಕತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹೇಳುವ ಪ್ರಕಾರ ಡಿ.ಎಲ್ ಇಲ್ಲದೇ ಇದ್ದರೂ ವಿಮೆ ಚಾಲ್ತಿಯಲ್ಲಿ ಇದ್ದ ಕಾರಣ, ನಾವೇ ಪರಿಹಾರಕೊಡಲು ಭಾದ್ಯಸ್ಥರು ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಜಿ.ಪಿ ವಕೀಲರಿಂದ 1 ನೇ ಎದುರುದಾರರ ಪರಃ

ನಿ.ಆರ್-15 ಮತ್ತು 16 ರಲ್ಲಿ ವಿಳಾಸದಲ್ಲಿ ತೋರಿಸಿರುವವರು 7 ದಿನಗಳಿಗಿಂತ ಹೆಚ್ಚು ಗೈರು ಹಾಜರು ಇರುವ ಕಾರಣ, ವಾಪಸ್ಸು ಮಾಡಲಾಗಿದ ಎಂದು ಇದೆ ಎಂದರೆ ಸರಿ. 1 ನೇ ಎದುರುದಾರನಿಗೆ ಕಳುಹಿಸಿದ ನೋಟೀಸ್ ನಿ.ಆರ್-15 ಮತ್ತು 16 ರ

ಪ್ರಕಾರ ಜಾರಿ ಆಗಿಲ್ಲ ಎಂದರೆ ಸರಿ. ಅಪಘಾತದ ಸಮಯದಲ್ಲಿ ವಿಮೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ವಿಮೆ ಇದ್ದ ಕಾರಣ ನಾವೇ ಪರಿಹಾರಕೊಡಲು ಭಾದ್ಯಸ್ಥರು ಎಂದರೆ ಸರಿಯಲ್ಲ. ಈ ಅರ್ಜಿಯಲ್ಲಿ ಆರ್.ಟಿ.ಓ ಇವರ ವಿಚಾರಣೆ ಆದ ನಂತರ, ಚಾಲಕನ ವಿರುದ್ದ ಪೋಲೀಸ್ ಪಿರ್ಯಾದಿ ಕೊಟ್ಟಿದ್ದೇವೆ. ಸದರಿ ಪಿರ್ಯಾದಿಯ ಪ್ರತಿಯನ್ನು ನಮ್ಮ ವಕೀಲರಿಗೆ ಕೊಟ್ಟಿರಬಹುದು. ಚಾಲಕನ ವಿರುದ್ದ ಯಾವುದೇ ಪಿರ್ಯಾದಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ತನಗೆ ಡಿ.ಎಲ್ ಇದೆ ಎಂದು ತನ್ನ ಮೂಲ ಡಿ.ಎಲ್ ನ್ನು ವಾಹನದ ಮಾಲೀಕರಿಗೆ ತೋರಿಸಿದರೆ, ವಾಹನದ ಮಾಲೀಕರು ಡಿ.ಎಲ್ ಇದೆ ಎಂದು ನಂಬುತ್ತಾರೆ ಎಂದರೆ ಸರಿಯಲ್ಲ. ಮುಂಬಯಿಯಲ್ಲಿ ಎಷ್ಟು ಆರ್.ಟಿ.ಓ ಕಚೇರಿಗಳು ಇವೆ ಎಂದು ನನಗೆ ಗೊತ್ತಿಲ್ಲ. ಮುಂಬಯಿಯ ಎಲ್ಲಾ ಆರ್.ಟಿ.ಓ ಕಚೇರಿಗಳಲ್ಲಿ ನೀವು ಏನಾದರೂ ವಿಚಾರಣೆ ಮಾಡಿ, ಡಿ.ಎಲ್ ಬಗ್ಗೆ ತಿಳಿದುಕೊಂಡೀರಾ ಎಂದರೆ ಸಾಕ್ಷಿ ಆನ್ ಲೈನ್ ಇರುವ ಕಾರಣ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ನಿ.ಆರ್-6 ತೋರಿಸಿ ಅದು ಕೈಬರಹದಲ್ಲಿ ಇರುವ ಡಿ.ಎಲ್ ಎಂದರೆ ಸರಿ. ಅದು ನೈಜು ದಾಖಲೆ ಅಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಇದು ನೈಜ ದಾಖಲೆ ಅಲ್ಲ ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ ಎಂದರೆ ಸಾಕ್ಷಿ ನಾವು ಸರ್ಟಿಫೈಡ್ ಮಾಡಿಲ್ಲ ಎಂದು ಹೇಳುತ್ತಾರೆ. ನಿ.ಆರ್-6 ನಲ್ಲಿ ಆರ್.ಟಿ.ಓ ರವರ ಸೀಲ್ ಮತ್ತು ಸಹಿ ಇದೆ ಎಂದರೆ ಸಾಕ್ಷಿ ಆರ್.ಟಿ.ಓ ರವರ ಸಾಕ್ಷಿ ಮಾಡಿಸಿದ್ದೇವೆ ಎಂದು ಹೇಳುತ್ತಾರೆ.

3 ನೇ ಎದುರುದಾರರ ಪರ ವಕೀಲರು ಗೈರು ಹಾಜರು ಇದ್ದು, ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದು ಕೊಳ್ಳಲಾಯಿತು.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**